ಕ್ರೀಡಾಂಗಣಕ್ಕೆ ಹೋದಾಗ ಅಲ್ಲಿ ರಸ್ತೆಗಳು ಮತ್ತು ಚರಂಡಿ ವ್ಯವಸ್ಥೆಗಳು ಬಹಳ ಹದಗೆಟ್ಟಿರುವುದನ್ನು ನೋಡಿದ್ದೇನೆ. ಕೂಡಲೇ ೯,೬೫,೦೦೦ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆ ಹಾಗೂ ಬಾಸ್ಕೆಟ್‌ಬಾಲ್ ಆವರಣಕ್ಕೆ ಫೆನ್ಸಿಂಗ್, ಮುಂತಾದ ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆ. ಅದು ಮುಗಿಯುವ ಹಂತದಲ್ಲಿದೆ. ಹಾಗೆಯೇ ಕಾಂಪೌಂಡ್ ಹಾಕಿಸುವ ಕಾಮಗಾರಿಯ ಬಗ್ಗೆ ಅಂದಾಜನ್ನು ತಯಾರಿಸಿ ಅದನ್ನು ಆದಷ್ಟು ಜಾಗ್ರತೆ ಪೂರ್ಣಗೊಳಿಸಲು ನಾನು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಶೂನ್ಯವೇಳೆಯ ಪ್ರಸ್ತಾಪಗಳು ಇನ್ನೂ ಹಲವಾರು ಇವೆ. ಅವುಗಳನ್ನು ಒಂದೇ ದಿನದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ. ಪ್ರತಿ ದಿನವೂ ೩-೪ ತೆಗೆದುಕೊಂಡು ಮುಗಿಸೋಣ. ಈಗ ಗಮನಸೆಳೆಯುವ ಸೂಚನೆ.

೫. ಗಮನ ಸೆಳೆಯುವ ಸೂಚನೆ:

ಮೈಸೂರಿನಲ್ಲಿರುವ ಚಾಮುಂಡಿ ಮೆಷಿನ್ ಟೂಲ್ಸ್ ಲಿಮಿಟೆಡ್ ಫ್ಯಾಕ್ಟರಿ ಮುಚ್ಚಿರುವುದರಿಂದ ಕಾರ್ಮಿಕರಿಗೆ ಉಂಟಾಗಿರುವ ತೊಂದರೆ.

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಸನ್ಮಾನ್ಯ ಸಭಾಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಬರುವ ಚಾಮುಂಡಿ ಮೆಷಿನ್ ಟೂಲ್ಸ್ ಲಿಮಿಟೆಡ್ ಫ್ಯಾಕ್ಟರಿಯು ತುರ್ತು ಕಾರಣಗಳಿಗಾಗಿ ನಷ್ಟದಿಂದ ಕೂಡಲೇ ಮುಚ್ಚುವ ಸ್ಥಿತಿಗೆ ಬಂದು, ಮುಚ್ಚುವ ಎಲ್ಲಾ ಸಿದ್ಧತೆಗಳನ್ನು ಮಾಡಲಾಗುತ್ತಿದೆ. ಸಾವಿರಾರು ಕಾರ್ಮಿಕರು ಈ ರೀತಿ ಮುಚ್ಚುವುದರಿಂದ ಬೀದಿಪಾಲಾಗುತ್ತಿದ್ದಾರೆ. ಈ ವಿಷಯ ಬಹಳ ಗಂಭೀರವಾಗಿದೆ, ತುರ್ತಾಗಿದೆ. ಈ ವಿಚಾರವನ್ನು ಸರಕಾರದ ಸನ್ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

+ ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಈ ಕೆಳಗಿನ ಹೇಳಿಕೆಯನ್ನು ನಾನು ನೀಡುತ್ತೇನೆ.

ಚಾಮುಂಡಿ ಮೆಷಿನ್ ಟೂಲ್ಸ್ ನಿಯಮಿತ (ಸಿಎಂಟಿಎಲ್)ವು 1975ರಲ್ಲಿ ಕೇಂದ್ರ ಸರ್ಕಾರದ ಹಾಫ್ ಮಿಲಿಯನ್ ಜಾಬ್ಸ್ ಯೋಜನೆಯಡಿಯಲ್ಲಿ ಹೆಚ್‌ಎಂಟಿಯ ಸಹಯೋಗದೊಂದಿಗೆ ಪ್ರಾರಂಭಿಸಲಾಯಿತು. ಇಲ್ಲಿ ಎಲ್‌ಬಿ - 17 ಸೆಂಟರ್ ಲೇತ್‌ಗಳನ್ನು ತಯಾರಿಸಲಾಗುತ್ತಿದೆ. ಈ ಕಂಪನಿಯು 10 ಅನ್ಸಿಲರಿ ಯುನಿಟ್ಸ್‌ಗಳನ್ನು ಹೊಂದಿದ್ದು (ಘಟಕಗಳು) ಈ ಎಲ್‌ಬಿ - 17 ಸೆಂಟರ್ ಲೇತ್‌ಗಳ ಅವಶ್ಯವಿರುವ

ಉಪ ವಿಭಾಗಗಳನ್ನು ಸರಬರಾಜು ಮಾಡುತ್ತಾ ಇದೆ.

ಈ ಕಂಪನಿಯ ಷೇರು ಬಂಡವಾಳವು 130 ಲಕ್ಷ ರೂಪಾಯಿಗಳಿದ್ದು ಪ್ರತಿ ಷೇರಿನ ಬೆಲೆಯು ರೂ 100.00 ಆಗಿದೆ. ಇದರಲ್ಲಿ ಪೂರ್ಣವಾಗಿ ಪಾವತಿಯಾಗಿರುವ ಷೇರಿನ ಮೊತ್ತವೂ ರೂ. 63,50,100-00 ಹಾಗೂ ಈ ಪೂರ್ಣ ಷೇರುಗಳು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಇದೆ. ಈ ಕಂಪನಿಯು ಪ್ರಾರಂಭದಿಂದಲೂ ಸತತವಾಗಿ ನಷ್ಟವನ್ನು ಅನುಭವಿಸುತ್ತಾ ಬಂದು ದಿನಾಂಕ: 31-3-99ರ ಅಂತ್ಯದಲ್ಲಿ ಕ್ರೋಢೀಕೃತ ನಷ್ಟ ರೂ . 465.52 ಲಕ್ಷಗಳಾಗಿದೆ. ಈ ಕಂಪನಿಯ ನಿವ್ವಳ ಮೌಲ್ಯವು (ನೆಟ್ ವರ್ತ್) ದಿ: 31-3-99 ರಂದು (-) 389.71 ಲಕ್ಷ ರೂಪಾಯಿಗಳಾಗಿದೆ. ಈ ರೀತಿಯಾಗಿ ಕಂಪನಿಯು ಸತತವಾಗಿ ನಷ್ಟವನ್ನು ಅನುಭವಿಸುತ್ತಾ ಬಂದ ಹಿನ್ನೆಲೆಯಲ್ಲಿ ಸಾರ್ವಜನಿಕ ಉದ್ದಿಮೆಗಳ ಸಮಿತಿಯು ತನ್ನ 62ನೇ ವರದಿಯಲ್ಲಿ ಕಂಪನಿಯನ್ನು ಖಾಸಗೀಕರಣಗೊಳಿಸಲು ಅಥವಾ ಸಾಧ್ಯವಾಗದೇ ಇದ್ದಲ್ಲಿ ಕಂಪನಿಯನ್ನು ಮುಚ್ಚಲು ಶಿಫಾರಸ್ಸು ಮಾಡಿದೆ. ಸರ್ಕಾರವು ಈ ಕಂಪನಿಯನ್ನು ಖಾಸಗೀಕರಣಗೊಳಿಸಲು ನಿರ್ಣಯಿಸಿ ಅದರಂತೆ ಕೆ.ಎಸ್.ಐ.ಐ.ಡಿ.ಸಿ.ಯನ್ನು ಆಪರೇಟಿಂಗ್ ಏಜನ್ಸಿಯನ್ನಾಗಿ 1995ರಲ್ಲಿ ನೇಮಿಸಿದೆ. ಅದರಂತೆ ಸರ್ಕಾರದ ಷೇರುಗಳನ್ನು ಖರೀದಿ ಮಾಡಲು ವ್ಯಾಪಕವಾದ ಪ್ರಚಾರವನ್ನು ನೀಡಲಾಗಿದೆ. ಈ ಬಗ್ಗೆ ಯಾವ ಖಾಸಗೀ ಉದ್ದಿಮೆದಾರರಿಂದ ಈ ಕಂಪನಿಯನ್ನು ಕೊಳ್ಳುವ ಬಗ್ಗೆ ಅರ್ಜಿಯು ಬಂದಿರುವುದಿಲ್ಲ.

ಕಳೆದ 3 ವರ್ಷಗಳಲ್ಲಿ ಈ ಕಂಪನಿಯ ಕಾರ್ಯಾಚರಣೆ ಕೆಳಕಂಡಂತೆ ಇದೆ:

ವರ್ಷ	ವಹಿವಾಟು (ಮಾರಾಟ)	ನಷ್ಟ
1996-97	232.20 ಲಕ್ಷ	(-) 15.65 ಲಕ್ಷ
1997-98	158.18 ಲಕ್ಷ	(-) 47.38 ಲಕ್ಷ
1998-99	131.27 ಲಕ್ಷ	(-)57.91 ಲಕ್ಷ

ಈ ಕಂಪನಿಯು ಹೊಂದಿರುವ ಒಟ್ಟು ಆಸ್ತಿಯ ಮೌಲ್ಯವು ರೂ.234.00 ಲಕ್ಷಗಳಾಗಿದ್ದು ಕಂಪನಿಯ ಹೊಣೆಗಾರಿಕೆಯು ಸುಮಾರು 400 ಲಕ್ಷ ರೂಪಾಯಿಗಳಾಗಿದೆ. ದಿ: 30-4-98ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಕಂಪನಿಯಲ್ಲಿರುವ ಹೆಚ್ಚುವರಿ ನೌಕರರನ್ನು ಸ್ವಯಂ ನಿವೃತ್ತಿ ಯೋಜನೆ ಮೂಲಕ ನಿವೃತ್ತಿಗೊಳಿಸಿ ಕಂಪನಿಯನ್ನು ಮುಚ್ಚುವ ಬಗ್ಗೆ ನಿರ್ಣಯಿಸಲಾಗಿದೆ. ಈ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸಲು ಸುಮಾರು 170 ಲಕ್ಷ ರೂಪಾಯಿಗಳು ಬೇಕಾಗುತ್ತಿದ್ದು ಈ ಬಗ್ಗೆ ಪರಿಶೀಲನೆಯಲ್ಲಿದೆ. ಈಗ ಕಂಪನಿಯಲ್ಲಿ ಒಟ್ಟು 106 ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ.

ಈ ಕಂಪನಿಯು ತಯಾರು ಮಾಡುತ್ತಿರುವ ಎಲ್‌ಬಿ - 17 ಲೇತ್‌ಗಳು ಹಾಲಿ ಅಂತಹ ಬೇಡಿಕೆ ಇಲ್ಲದೆ ಇರುವುದರಿಂದ ಹಾಗೂ ತೀವ್ರತರವಾದ ಪೈಪೋಟಿಯನ್ನು ಎದುರಿಸುತ್ತಿರುವುದರಿಂದ ಕಂಪನಿಯ ಉತ್ಪಾದನೆಯು ಬಹಳ ಕಡಿಮೆ ಮಟ್ಟದಲ್ಲಿದೆ. ಅಲ್ಲದೆ ಕಂಪನಿಯು ಶಾಸನಬದ್ಧ ಪಾವತಿಗಳಾದ ಹಾಗೂ ಮಾರಾಟ ತೆರಿಗೆ ಹಾಗೂ ಸರ್ಕಾರದ ಸಾಲವನ್ನು ಇದುವರೆಗೂ ಹಿಂತಿರುಗಿಸಲು ಸಾಧ್ಯವಾಗಿಲ್ಲ. ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಈ ಖಾಸಗೀಕರಣ ಪ್ರಯತ್ನವು ಯಾವುದೇ ಫಲಪ್ರದ ಆಗದೇ ಇರುವುದರಿಂದ ಹಾಗೂ ಕಂಪನಿಯಲ್ಲಿ ಈಗಿರುವ ತಂತ್ರಜ್ಞಾನದಿಂದ ಬೇರೆ ಉತ್ಪಾದನೆಗಳ ಉತ್ಪಾದನೆ ಸಾಧ್ಯವಿಲ್ಲದೆ ಇರುವುದರಿಂದ ಈ ಕಂಪನಿಯನ್ನು ಮುಂದುವರಿಸಿಕೊಂಡು ಹೋಗುವುದು ಕಷ್ಟಸಾಧ್ಯವಾಗಿದೆ. ಈ ಬಗ್ಗೆ ಸರ್ಕಾರವು ಪರಿಶೀಲಿಸಿದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು.

ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೇ, ಈ ಕಾರ್ಖಾನೆಯನ್ನು ಉಳಿಸಿಕೊಳ್ಳುವತ್ತ ಸರಕಾರದವರು ಗಮನಕೊಡಬೇಕು. ಲೇಬರ್ ಡಿಪಾರ್ಟ್‌ಮೆಂಟ್‌ನವರ ಕೆಲವೊಂದು ಇನ್ಸ್ಟ್ರಕ್ಷನ್ಸ್ ಏನಿವೆ, ಅವುಗಳಲ್ಲಿರತಕ್ಕಂಥ ಲೇಥ್‌ಗಳನ್ನು ಕೇವಲ ರಿಪೇರಿಗೆ ಕೊಡುವ ಕೆಲಸ ಮಾಡಿದರೂ ಈ ಕಾರ್ಖಾನೆಯು ಬದುಕಿಕೊಳ್ಳುತ್ತದೆ. ಅಂಥವರು ಇವ್ಹೊತ್ತು ತಮ್ಮ ರಿಪೇರಿ ಕೆಲಸಗಳನ್ನು ಖಾಸಗಿಯವರಿಗೆ ಕೊಟ್ಟು ಮಾಡಿಸಕೊಳ್ಳುತ್ತಿದ್ದಾರೆ. ಅದೇ ಈ ಕಾರ್ಖಾನೆಯವರಿಗೆ ಆರ್ಡರ್‌ನ್ನು ಕೊಡುತ್ತಾ ಇಲ್ಲ. ಇವರು ಕೆಲಸ ಮಾಡಲು ತಯಾರಾಗಿದ್ದಾರೆ. ಇದರ ಬಗ್ಗೆ ತಾವುಗಳು ತನಿಖೆ ಮಾಡಿಸಬೇಕು. ನಮ್ಮ ಸರಕಾರದ ಅಧೀನದಲ್ಲಿರತಕ್ಕಂಥ ಸಂಸ್ಥೆಗಳಲ್ಲಿ ಇರುವ ಲೇಥ್‌ಗಳನ್ನು ರಿಪೇರಿ ಮಾಡುವಂಥ ಕೆಲಸವನ್ನು ದಯಮಾಡಿ ಈ ಫ್ಯಾಕ್ಟರಿಯ ಮೂಲಕವೇ ಮಾಡಿಸಬೇಕು. ಹೀಗೆ ಮಾಡಿದಲ್ಲಿ ಈ ಫ್ಯಾಕ್ಟರಿಯನ್ನು ಮುಚ್ಚುವ ಸ್ಥಿತಿ ಬರುವುದಿಲ್ಲ. ಖಾಸಗಿಯವರಿಂದ ರಿಪೇರಿ ಮಾಡಿಸುವ ಬದಲು ನಮ್ಮ ಫ್ಯಾಕ್ಟರಿಯವರಿಂದಲೇ ಮಾಡುವುದರಲ್ಲಿ ಯಾವ ಸಮಸ್ಯೆ ಇದೆ?

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೇ, ಈ ಕಂಪನಿಯಿಂದ ನಾವು ಸರಕಾರದವರು ಎಷ್ಟು ಸಾಧ್ಯವೋ ಅಷ್ಟು ಕೆಲಸಗಳನ್ನು ಮಾಡಿಸಿಕೊಳ್ಳಲು ಪ್ರಯತ್ನಗಳನ್ನು ಮಾಡುತ್ತಾ ಇದ್ದೇವೆ. ಮೊದಲು ಇವರಿಗೆ ಹೆಚ್‌ಎಂಟಿ ಯವರಿಂದ ಆರ್ಡರ್ಸ್ ಸಿಗುತ್ತಾ ಇತ್ತು. ಈಗ ಅವರಿಂದ ಆರ್ಡರ್ಸ್ ಬರುತ್ತಾ ಇಲ್ಲ. ಏಕೆಂದರೆ ಈ ಲೇಥ್‌ಗಳು ಇವ್ಹೊತ್ತು ನಡೆಯುತ್ತಾ ಇಲ್ಲ. ಆದರೂ ಕೂಡ ಕಳೆದ ವರ್ಷ ಇವರು 56 ಲೇಥ್‌ಗಳನ್ನು ಸಪ್ಲೈ ಮಾಡಿದ್ದಾರೆ. ಈ ವರ್ಷಕ್ಕೆ ಈಗಾಗಲೇ ಐದು ಲೇಥ್‌ಗಳಿಗೆ ಆರ್ಡರ್ ಬಂದಿದೆ. ಈ ರೀತಿಯಲ್ಲಿ ಸರಕಾರದಿಂದ ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನವನ್ನು ಸರಕಾರ ಮಾಡುತ್ತಿದೆ. ಆದರೆ ಇದಕ್ಕೂ ಇತಿಮಿತಿ ಇದೆ. ಇದನ್ನು ಖಾಸಗೀಕರಣ ಮಾಡಿದರೂ ಯಾರೂ ತೆಗೆದುಕೊಳ್ಳಲು ಮುಂದೆ ಬರುವುದಿಲ್ಲ. ನಾವು ಇಲ್ಲಿನ 106ಜನ ಕಾರ್ಮಿಕರ ಹಿತವನ್ನು ಕೂಡ ನೋಡಿಕೊಳ್ಳಬೇಕು.

ಇವರುಗಳಿಗೆ ಸರಕಾರದವರು ಕೆಲಸ ಕೊಡಲು ಆಗುವುದಿಲ್ಲ. ಒಂದು ವೇಳೆ ಖಾಸಗಿ ವಲಯದಲ್ಲಿ ಎಲ್ಲಿಯಾದರೂ ಕೆಲಸ ಇದ್ದರೆ ಅದಕ್ಕೆ ಕಂಪನಿಯವರು ಪ್ರಯತ್ನಗಳನ್ನು ಮಾಡಿದರೆ ಸರಕಾರದವರು ಅವರ ಮೇಲೆ ಒತ್ತಡ ತಂದು ಕೆಲಸ ಕೊಡಲು ಹೇಳಬಹುದೇ ಏನಹ ಸರಕಾರದ ವತಿಯಿಂದ ಈ ಕಂಪನಿಗೆ ಲೇಥ್‌ನ ಕೆಲಸವನ್ನು ಕೊಡಲು ಆಗುವುದಿಲ್ಲ. ನಮಗೆ ಲೇಥ್ ಬೇಕಾಗಿದ್ದಲ್ಲಿ ಈ ಕಂಪನಿಗೆ ಆರ್ಡರ್‌ಗಳನ್ನು ಕೊಡುತ್ತೇವೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೇ, ಕಳೆದ ಬಾರಿಯ ಅಧಿವೇಶನದಲ್ಲಿ ಮೂರು ಸಾರಿ ಈ ವಿಚಾರಗಳನ್ನು ಪ್ರಸ್ತಾಪಿಸಿದ್ದರೂ ಕೂಡ ಸೂಕ್ತ ಉತ್ತರ ಬರಲಿಲ್ಲ. ಒಂದು ಸಾರಿ ಮಾತ್ರ ಪ್ರಸ್ತಾಪ ಮಾಡಿದಾಗ ಜಿಟಿಟಿಸಿಯವರಿಗೆ ಅದನ್ನು ಟ್ರೈನಿಂಗ್ ಸೆಂಟರ್ ಆಗಿ ಪರಿವರ್ತನೆ ಮಾಡಿಕೊಳ್ಳಲು ಒಂದು ಮಾತುಕತೆಯನ್ನು ಮಾಡಿ ನೆಗೋಸಿಯೇಷನ್ ಮೂಲಕ ಪ್ರೊಪೋಸಲ್ಸ್‌ನ್ನು ಮುಂದ ಇಟ್ಟರು. ಜೊತಗೆ 1999ರ ಕೊನೆಯಲ್ಲಿ 2000ದ ಮೊದಲನೇ ಭಾಗದಲ್ಲಿ ಸುಮಾರು 43ಲೇಥ್‌ಗಳಿಗೆ ಹರಿಯಾಣದ ಹೆಚ್‌ಎಂಟಿ ಕಂಪನಿಯಿಂದ ಆರ್ಡರ್ ಬಂತು. ಆ ರೀತಿ ಬಂದಿರುವ ಒಂದು ಕೋಟಿ ರೂಪಾಯಿಗಳಲ್ಲಿ ಅದರಲ್ಲೂ ಅವ್ಯವಹಾರವಾಗಿರುವ ಬಗ್ಗೆ ತನಿಖೆ ಮಾಡುವುದಕ್ಕೆ ಹೊರಟಿದ್ದಾರೆ. ಅಲ್ಲಿ ನೂರಾರು ಕೆಲಸಗಾರರು ಯಾರಿದ್ದಾರೆ, ಅವರಲ್ಲಿ 14ಜನ ಅಂಗವಿಕಲರಿದ್ದಾರೆ. ಅವರು 14 ವರ್ಷಗಳಿಂದಲೂ ಯಾವ ರೀತಿಯಲ್ಲೂ ಸಂಬಳವನ್ನು ಜಾಸ್ತಿ ಮಾಡಿ ಎಂದು ಕೇಳಿಲ್ಲ. ಜಿಟಿಡಿಸಿ ಯಲ್ಲಿ ಆದ ಮಾತುಕತೆ ಏನಾಯಿತು? ಎಆರ್‌ಎಸ್ ಕೊಡುವ ವಿಚಾರದಲ್ಲಿ ಒಂದು ವರ್ಷದ ಹಿಂದೆಯೇ ಚರ್ಚೆಯಾಗಿದ್ದರೂ ಇನ್ನು ಎಕ್ಸಿಕ್ಯೂಟ್ ಮಾಡದೆ ಇರುವ ಪರಿಸ್ಥಿತಿ ಏತಕ್ಕೆ ನಿರ್ಮಾಣವಾಗಿದೆ? ಇದು ಅಂತಿಮವಾಗುವ ಹಾಗೆ ಆಗಬೇಕು. ಅವರನ್ನು ಬೇರೆ ಕಡೆ ಪರಿವರ್ತನೆ ಮಾಡುವುದಾದರೂ ಕೂಡ ತಮ್ಮಿಂದಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಎಸ್.ಗುರುಸ್ವಾಮಿ: ಮಂತ್ರಿಗಳು ಅದನ್ನು rejuvenate ಮಾಡುತ್ತೇವೆ ಎನ್ನುವ ಮಾತನ್ನು ಹೇಳದೆ ಆ ಕಂಪನಿಯನ್ನು ಮುಚ್ಚುತ್ತೇನೆ ಎಂದು ಹೇಳುತ್ತಾರಲ್ಲ ಇದು ದುಃಖಕರವಾದ ಮಾತು. ಇವತ್ತು ಐಟಿಐ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಲೇಥ್‌ಗಳಿವೆ, ಅದನ್ನು ರಿಪೇರಿ ಮಾಡುವುದಕ್ಕೆ ಅಲ್ಲಿಗೆ ಅವಕಾಶ ಕೊಡಿ. ಆ ರೀತಿಯಾದರೆ ಕಂಪನಿಯನ್ನು ಮುಚ್ಚುವ ಪ್ರಶ್ನೆಯೇ ಬರುವುದಿಲ್ಲ. You will be saving 250 families. They will worship you. They will remember you. Kindly think of it.

ಶ್ರೀ ಆರ್.ವಿ.ದೇಶ್‌ಪಾಂಡೆ: ಮಾನ್ಯ ಅಧ್ಯಕ್ಷರೇ, ಯಾವ ಸರ್ಕಾರಕ್ಕೂ ಯಾವುದೇ ಕೈಗಾರಿಕೆಯನ್ನು ಮುಚ್ಚಬೇಕು ಎನ್ನುವ ಮನಸ್ಸು ಇರುವುದಿಲ್ಲ. ಆ ರೀತಿಯಲ್ಲಿ ಈ ಸರ್ಕಾರವೂ ಇಲ್ಲ. ಮಾನ್ಯ ಸ್ನೇಹಿತರು ಶಾಸಕರು ಒಂದು ಸಲಹೆಯನ್ನು ಕೊಟ್ಟಿದ್ದಾರೆ,

ಐಟಿಐ ಮತ್ತು ಪಾಲಿಟೆಕ್ನಿಕ್‌ಗಳಿಗೆ ಲೇಥ್‌ಗಳನ್ನು ರಿಪೇರಿ ಮಾಡಿಕೊಡುವುದಕ್ಕೆ ಅವರಿಗೆ ಕೂಡಿ ಎಂದಿದ್ದಾರೆ, ಇದರ ಬಗ್ಗೆ ನಾನು ಮಾನ್ಯ ಶಿಕ್ಷಣ ಸಚಿವರ ಜೊತೆ ಚರ್ಚೆ ಮಾಡಿ ಆ ರೀತಿ ವ್ಯವಸ್ಥೆ ಇದ್ದರೆ ಖಂಡಿತವಾಗಿಯೂ ಅದರ ಬಗ್ಗೆ ಪ್ರಯತ್ನವನ್ನು ಮಾಡುತ್ತೇನೆ. ಇದನ್ನು ಒಂದು ವರ್ಷ ಜಿಟಿಡಿಸಿಯವರು ನಡೆಸಿದರು. ಆಗ ಅವರು ಇದನ್ನು ನಡೆಸುವುದಕ್ಕಾಗುವುದಿಲ್ಲವೆಂದು ಹೇಳಿದರು. ಮತ್ತು ಇಷ್ಟೊಂದು ಸಿಬ್ಬಂದಿಯ ಅವಶ್ಯಕತೆಯೂ ನಮಗಿಲ್ಲ. ಸರ್ಕಾರದಿಂದ ನಮಗೆ ಗ್ರಾಂಟ್ಸ್ ಕೊಡಿ ಮತ್ತು ಇಲ್ಲಿರುವ ಸಿಬ್ಬಂದಿಯನ್ನು ಕಡಿಮೆ ಮಾಡಿ ಎಂದು ಜಿಟಿಡಿಸಿಯವರು ಹೇಳಿದರು. ಹೀಗೆ ಜಿಟಿಡಿಸಿಯವರು ಒಂದು ವರ್ಷ ನಡೆಸಿ ವಾಪಸ್ ಹೋಗಿದ್ದಾರೆ. ಮುಖ್ಯವಾಗಿ ಈ ಕೈಗಾರಿಕೆಗೆ ಕೆಲಸ ಸಿಕ್ಕಿದರೆ ಈ ಕೈಗಾರಿಕೆ ಉಳಿಯುತ್ತದೆ. ಸರ್ಕಾರದಿಂದ ಇದಕ್ಕೆ ಯಾವ ಕೆಲಸ ಇಲ್ಲ. ಆದರೆ ಮಾನ್ಯ ಸದಸ್ಯರು ಏನು ಪಾಲಿಟೆಕ್ನಿಕ್ ಮತ್ತು ಐಟಿಐಗಳಿಗೆ ಲೇಥ್‌ಗಳ ರಿಪೇರಿ ಮಾಡಿಸಬಹುದು ಎಂದು ಹೇಳಿದ್ದಾರೆ, ಇದರ ಬಗ್ಗೆ ನಾನು ಮಾನ್ಯ ಶಿಕ್ಷಣ ಸಚಿವರ ಜೊತೆ ಮಾತನಾಡಿ ಖಂಡಿತವಾಗಿಯೂ ಇದರ ಬಗ್ಗೆ ಸಹಾಯ ಮಾಡುವುದಕ್ಕೆ ಸಾಧ್ಯವಿದ್ದರೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೇ, ಇದು 200 ಜನರ ಒಂದು ಬದುಕಿನ ಪ್ರಶ್ನೆ. ಏಆರ್‌ಎಸ್‌ನ್ನು ಯಾವಾಗ ಕೊಡುತ್ತೀರೆಂದು ಹೇಳಿ. ಒಂದು ಕಟ್ ಆಫ್ ಡೇಟನ್ನಾದರೂ ಹೇಳಿ. ಇದರ ಬಗ್ಗೆ ಇದೇ ಸದನದಲ್ಲಿ ಮೂರು ಸಲ ಚರ್ಚೆಯಾಗಿದೆ. ಯಾವಾಗ ಏಆರ್‌ಎಸ್‌ನ್ನು ಇಂಟ್ರಡ್ಯೂಸ್ ಮಾಡುತ್ತೀರಿ ಎಂದು ಹೇಳಿ.

ಶ್ರೀ ಆರ್.ವಿ.ದೇಶ್‌ಪಾಂಡೆ: ಮಾನ್ಯ ಅಧ್ಯಕ್ಷರೇ, ಏಆರ್‌ಎಸ್-ನ್ನು ಇಂಟ್ರಡ್ಯೂಸ್ ಮಾಡುವ ಬಗ್ಗೆ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಮತ್ತೊಂದು ಪರಿಶೀಲನೆ ಕೂಡ ನಡೆಯುತ್ತಿದೆ. ಇದಕ್ಕೆ ಕೆಎಸ್‌ಐಐಡಿಸಿ ಮತ್ತು ಕೆಎಸ್‌ಎಫ್‌ಸಿಯವರು ಸಾಲವನ್ನು ಕೊಟ್ಟಿದ್ದಾರೆ. ಹಾಗಾಗಿ ಸೆಕ್ಷನ್ 29ರ ಪ್ರಕಾರ ಈ ಕಂಪನಿಯನ್ನು ತೆಗೆದುಕೊಂಡು ಇಲ್ಲಿರುವ ಕಾರ್ಮಿಕರಿಗೆ ಗ್ರಾಚುಯಿಟಿ, ಪ್ರಾವಿಡೆಂಟ್ ಫಂಡ್, ಕೈಗಾರಿಕೆ ಮುಚ್ಚುವತನಕವೂ ಇವರಿಗೆ ಸ್ಯಾಲರಿ ಕೊಡಬೇಕೆ ಎನ್ನುವ ಬಗ್ಗೆಯೆಲ್ಲಾ ಪರಿಶೀಲನೆ ನಡೆಯುತ್ತಿದೆ. ಹಾಗಾಗಿ ನೇರವಾಗಿ ಇದರ ಬಗ್ಗೆ ಇವತ್ತೇ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ಇದು ಪರಿಶೀಲನೆಯಲ್ಲಿದೆ.